## ಬಿ ಪಾಸಿಟಿವ್

### ನಂಬಿಕೆಯಿರಲಿ ಮೌಢ್ಯತೆ ಬೇಡ

ಅಪಶಕುನ ಕಾಲ್ಗುಣ ಅಥವಾ ದೆವ್ವ ಭೂತ ಎಂಬ ಮೂಢನಂಬಿಕೆ ವಿದ್ಯಾವಂತರಲ್ಲೂ ಆವರಿಸಿದ್ದು ಪ್ರಗತಿಯ ಸಂಕೇತವಂತೂ ಅಲ್ಲ. ಅಪಶಕುನದ ಮೂಢ ನಂಬಿಕೆ ಮನಸಿನ ಮೂಲೆಯಲಿ ಗಾಢವಾಗಿ ನೆಲೆ ನಿಂತಿದೆ. ಇದಕ್ಕೆಲ್ಲಾ ಕಾರಣ ನಕಾರಾತ್ಮಕ ಯೋಚನೆ. ಬದುಕಿನಲ್ಲಿ ನಡೆವ ಸಾಮಾನ್ಯ ಅವಘಡ, ಮನದ ದುಗುಡಕ್ಕೂ, ವಾಸ್ತು ಅಥವಾ ಅಪಶಕುನದ ಹೆಸರನ್ನಿಟ್ಟು ಬಿಡುವರು. ದಾರಿಯಲಿ ಅಡ್ಡವಾದ ಬೆಕ್ಕು, ಗೋಡೆಯಲಿ ಕಾಲು ಜಾರಿ ಮೈಮೇಲೆ ಬಿದ್ದ ಹಲ್ಲಿ, ಕಾಗೆಯೊಂದು ಮುಟ್ಟಿದ್ದಕ್ಕೆ ಶನಿಕಾಟ ಸಾವು ತರುವುದೆಂದು ಹಣೆಪಟ್ಟಿ ಕಟ್ಟಿ ಬಿಡುತ್ತಾರೆ. ತಲೆ ಬುಡ



ಇಲ್ಲದ ಈ ಮೂಢನಂಬಿಕೆ ಯಾರ ಉದ್ಧಾರಕ್ಕಾಗಿ ಇದೆ. ಪರೀಕ್ಷೆಯಲ್ಲಿ ಪಾಸ್ ಮಾಡು ದೇವರೆ ಎಂದು ದೇವರ ಮುಂದೆ ದೀಪ ಹಚ್ಚಿ ಕೂತರೆ ಉತ್ತೀರ್ಣರಾಗುತ್ತಾರಾ? ದೀಪದ ಬೆಳಕಲ್ಲಿ, ಪ್ರಾಮಾಣಿಕ ಪ್ರಯತ್ನದಿಂದ ಓದುವ ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ. ಮಕ್ಕಳಲ್ಲಿ ನಾವು ಮೂಢನಂಬಿಕೆ ಬಿತ್ತಬಾರದು. ಅದರ ಬದಲು ಪ್ರಯತ್ನಕ್ಕೆ ತಕ್ಕ ಫಲ ಸಿಗುತ್ತದೆ ಎಂದು ತಿಳಿಸಬೇಕು. ಹಾಗಂತ ದೇವರನ್ನು ನಂಬಬಾರದು ಎಂದು ಹೇಳುತ್ತಿಲ್ಲ. ದೇವರು ಎಂದರೆ ಒಂದು ಅದ್ಭುತ ಶಕ್ತಿ. ದೇವರು ಇದ್ದಾನೆ ಎಂಬುವುದೇ ಮನಸ್ಸಿಗೆ ಸಕಾರಾತ್ಮಕ ಶಕ್ತಿ. ನಂಬಿಕೆ ಸಕಾರಾತ್ಮಕವಾಗಿರಲಿ. ಪ್ರತಿ ಸಲ ದೇವರು ನಮ್ಮ ಬೇಡಿಕೆಯನ್ನು ಈಡೇರಿಸಲೇ ಬೇಕೆಂದೇನಿಲ್ಲ. ದೈವವನ್ನು ನಂಬುವುದು ತಪ್ಪಲ್ಲ. ದೈವವಿದ್ದರೆ ದೆವ್ವನು ಇರುತ್ತದೆ ಎಂದು ಮತ್ತೊಂದು ಮೂಢನಂಬಿಕೆ ಮನದಲ್ಲಿ ಪೋಷಿಸುವುದು ತಪ್ಪು. ಮನುಷ್ಯ ವೈಜ್ಞಾನಿಕವಾಗಿ ಯೋಚಿಸಲೇ ಬೇಕು. ಜೀವನದಲ್ಲಿ ನಂಬಿಕೆ ಇರಲಿ ಅತಿಯಾದ ಮೂಢ ನಂಬಿಕೆ ಬೇಡ. ಅತಿಯಾದದ್ದು ಯಾವುದು ಒಳ್ಳೆಯದಲ್ಲ. ದೇವರನ್ನು ಆರಾಧಿಸೋಣ. ನಮ್ಮ ಕಾಯಕದಲ್ಲಿ ಅವನನ್ನು ಕಾಣೋಣ.

• ಅಂಜಲಿ ಶ್ರೀನಿವಾಸ

## ಲವ್ಎವೆರಿ ಬಾಡಿ

ವ್ಯಕ್ತಿಯೊಬ್ಬ ತನ್ನ ಕಣ್ಣುಗುಡ್ಡೆಯ ಚಲನೆಯ ಸದ್ದನ್ನು ಕೇಳುತ್ತಾನೆ ಎಂದರೆ ನಂಬುತ್ತೀರಾ? ನಂಬಲೇ ಬೇಕು. ಹಾಗಂತ ಎಲ್ಲರಿಗೂ ಈ ಅನುಭವ ಆಗಲು ಸಾಧ್ಯವಿಲ್ಲ. ಇದು ಕಿವಿಗೆ ಸಂಬಂಧಪಟ್ಟ ಸುಪೀರಿಯರ್ ಕೆನಾಲ್ ಡಿಹಿಸೆನ್ಸ್ ಸಿಂಡ್ರೋಮ್ ಕಾಯಿಲೆಯ ಒಂದು ಲಕ್ಷಣ. ಕಣ್ಣಗುಡ್ಡೆ ಚಲನೆಯ



ಜೋರಾದ ಶಬ್ದಗಳು, ತ್ವರಿತ ತಲೆ ಚಲನೆಗಳೊಂದಿಗೆ ತಲೆತಿರುಗುವಿಕೆ, ಶ್ರವಣೇಂದ್ರಿಯ ತೊಂದರೆಯಂತಹ ಸಮಸ್ಯೆಗಳೆಲ್ಲಾ ಇಂತಹ ರೋಗಿಗಳನ್ನು ಕಾಡಬಹುದು. 1998 ರಲ್ಲಿ, ಜಾನ್ಸ್ ಹಾಪ್ಕಿನ್ಸ್‌ನ ಡಾ. ಲಾಯ್ಡ್ ಮೈನರ್ ಸುಪೀರಿಯರ್ ಕೆನಾಲ್ ಡಿಹಿಸೆನ್ಸ್ ಸಿಂಡ್ರೋಮ್ ಅನ್ನು ಗುರುತಿಸಿದರು. ಜನ್ಮಜಾತ ದೋಷ, ಆಘಾತ ಅಥವಾ ಸೋಂಕಿನಿಂದಲೂ ಈ ತೊಂದರೆ ಸಂಭವಿಸಬಹುದು.

• ದೇಹಾಭಿ'ಮಾಣಿ'

## ನೀವೂ ಬರೆಯಬಹುದು


**ನಮ್ಮ ವಿಳಾಸ:**
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com


# ಬೇಸಿಗೆ ರಜೆಯ ಮೋಜಿನ ಕಲಿಕೆ





ಚಿಣ್ಣರ ಲೋಕ

• ದೀಪಶ್ರೀ ಎಸ್ ಕೂಡ್ಲಿಗಿ



**ಬೇಸಿಗೆ ರಜೆಯು ಮಕ್ಕಳಿಗೆ ದೀರ್ಘ ಕಾಲಿಕ ಶಾಲೆಯಿಂದ, ಓದಿನಿಂದ ಕೆಲಕಾಲ ವಿಶ್ರಾಂತಿ ಪಡೆಯಲು, ಸ್ನೇಹಿತರೊಂದಿಗೆ ಆಟಗಳಲ್ಲಿ ತೊಡಗಿ ಕೊಳ್ಳಲು, ಸಂಬಂಧಿಕರ ಊರಿಗೆ ಪ್ರಯಾಣ ಬೆಳೆಸಲು ಮೋಜಿನ ಮೂಲಕ ಸಂತಸ ಹೊಂದಲು ಅವಕಾಶ ಒದಗಿಸುವ ಸಮಯ. ಇಂತಹ ಖುಷಿಯ ವಿಶ್ರಾಂತಿಯಿಂದ ಮಕ್ಕಳು ಕಲಿಕೆಯನ್ನು ಮರೆಯುವ ಸಾಧ್ಯತೆಗಳಿರುತ್ತವೆ. ಬೇಸಿಗೆ ರಜೆಯನ್ನು ಫಲಪ್ರದಗೊಳಿಸುವ ಬಗ್ಗೆ ಈ ಲೇಖನ.**

ಬೇಸಿಗೆ ರಜೆಯಲ್ಲಿ ಮಕ್ಕಳ ಕಲಿಯುವಿಕೆಯನ್ನು ಸಂಪೂರ್ಣವಾಗಿ ಕೈ ಬಿಡದೇ ಕೆಲ ಸಮಯ ಮಕ್ಕಳಿಗೆ ಹಿಂದಿನ ತರಗತಿಯ ಕಲಿಕೆಯನ್ನು ಪುನರಾವರ್ತನೆ ಮಾಡಿಸುವುದರಿಂದ ಕಲಿಕೆ ದೀರ್ಘಾವಧಿ ಉಳಿಯುತ್ತದೆ. ಜತೆಗೆ ಮುಂದಿನ ತರಗತಿಯಲ್ಲಿ ಅತಿ ವೇಗದಲ್ಲಿ ವಿಷಯದ ಕುರಿತು ಜ್ಞಾನ ಪಡೆಯಲು ಅಡಿಪಾಯ ಹಾಕುತ್ತದೆ. ಈ ನಿಟ್ಟಿನಲ್ಲಿ ಪೋಷಕರು ಮಕ್ಕಳ ಬೇಸಿಗೆ ಕಾಲದ ಕಲಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡುವುದು ಅಗ್ರಗಣ್ಯ ಜವಾಬ್ದಾರಿ. ಜತೆಗೆ ಈ ಸಂದರ್ಭದಲ್ಲಿ ಅವರಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು.

ಬೇಸಿಗೆ ರಜೆ ಆರಂಭವಾದ ನಂತರ ಪೋಷಕರು ಆಯಾ ತರಗತಿಯ ಶಿಕ್ಷಕರೊಟ್ಟಿಗೆ ಸಂವಹನ ನಡೆಸಿ ಮಕ್ಕಳು ಕಲಿಯಬೇಕಾದ ಹಾಗೂ ಕಡಿಮೆ ಜ್ಞಾನ ಹೊಂದಿರುವ ವಿಷಯದ ಕುರಿತು ಮಾರ್ಗದರ್ಶನ ಪಡೆಯುವುದು. ರೋಬೋಟಿಕ್ ವಿಧಾನದಂತೆ ವಿಷಯ ಕಲಿಸದೇ ರಸಪ್ರಶ್ನೆ, ಫ್ಲಾಷ್ ಕಾರ್ಡ್, ವಿಮರ್ಶೆ, ಅನುವಾದ, ರೂಪಾಂತರ, ವಿಶ್ಲೇಷಣೆ, ಚಿಂತನೆ, ಅಭ್ಯಾಸದ ಸಮಸ್ಯೆ ಮೂಲಕ ಕಲಿಸುವುದರಿಂದ ಮಕ್ಕಳ ಕಲಿಕೆ ಕುರಿತು ಬೇಸರ ಮಾಡಿಕೊಳ್ಳದೇ ಆಸಕ್ತಿವಹಿಸುವರು.

ಬೇಸಿಗೆಯ ರಜೆಯನ್ನು ಕಲಿಕೆಯ ರಹದಾರಿಯಾಗುಸುವಲ್ಲಿ ಪೋಷಕರ ಜವಾಬ್ದಾರಿ

- **ಮಕ್ಕಳಿಗೆ ಕಲಿಕೆಯ ಕುರಿತು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾರ್ಗದರ್ಶನ ಮಾಡುವುದು ಉತ್ತಮ.**
- **ಅನುಭವ ಮತ್ತು ಅನ್ವೇಷಣೆ ಈ ಎರಡು ಅ ಗಳ ಮೂಲಕ ಕಲಿತ ಮಕ್ಕಳ ಕಲಿಕೆ ದೀರ್ಘಕಾಲ ಉಳಿಯುತ್ತದೆ ಎಂದು ಮನೋಶಾಸ್ತ್ರ ತಿಳಿಸುತ್ತದೆ. ಉದಾ :- ಗಿಡಗಳ ಬೆಳವಣಿಗೆ, ಗಿಡಗಳ ಆಹಾರ ತಯಾರಿ, ಗಿಡಗಳ ಆಯಸ್ಸು ಮುಂತಾದ ವಿಷಯಗಳ ಅನ್ವೇಷಣೆ ಮಾಡುವುದು.**
- **ಒಂದು ಪುಸ್ತಕ ನೂರು ಜನ ಸ್ನೇಹಿತರಿಗೆ ಸಮ ಎಂಬ ಮಾತಿನಂತೆ ಮಕ್ಕಳ ಮನಸ್ಸಿಗೆ ಪೂರಕವಾದ ಪುಸ್ತಕಗಳನ್ನು ಓದುವಂತೆ ಪ್ರೇರೇಪಿಸುವುದು. ಇದರಿಂದ ಮಕ್ಕಳಲ್ಲಿ ಓದುವಿಕೆ, ಶಬ್ದಕೋಶಗಳ ಕೌಶಲ್ಯ ಸುಧಾರಿಸುತ್ತದೆ. ಹೊಸ ಪದಗಳ ಪರಿಚಯದ ಜತೆ ಓದಿನ ಹವ್ಯಾಸ ವೃದ್ಧಿಯಾಗುತ್ತದೆ. ಗ್ರಂಥಾಲಯಗಳಿಗೆ ಹೋಗಿ ಓದುವುದರಿಂದ ಜ್ಞಾನ ವೃದ್ಧಿ, ಪುಸ್ತಕಗಳ ಮೌಲ್ಯ ತಿಳಿಯುತ್ತದೆ.**



- **ಮಕ್ಕಳಿಗೆ ಮನೆಯಲ್ಲಿ ಜ್ಞಾನ ಒದಗಿಸಲು ಚಲನಚಿತ್ರ ಹಾಗೂ ಉತ್ತಮ ಕಾರ್ಯಕ್ರಮಗಳನ್ನು ನೋಡುವಂತೆ ಸೂಚಿಸುವುದು.**
- **ಬೇಸಿಗೆ ರಜೆಯಲ್ಲಿ ಕಬ್ಬಿಣದ ಕಡಲೆಯೆನಿಸಿರುವ ಗಣಿತ, ವ್ಯಾಕರಣದ ವಿಷಯಗಳನ್ನು ನೇರವಾಗಿ ಕಲಿಸದೇ ಇದಕ್ಕೆ ಪೂರಕವಾಗಿ ಒಗಟು, ವಸ್ತುವಿನ ಬಳಕೆ, ಹಣ್ಣು, ತರಕಾರಿಗಳನ್ನು ಬಳಕೆ ಮಾಡುವುದರ ಜತೆಗೆ ಹೇಳಿಕೊಡುವುದು. ಉದಾ :- ಒಂದು ಹಣ್ಣನ್ನು ಕತ್ತರಿಸಿದರೆ, ಅದರ ಭಿನ್ನರಾಶಿ ರೂಪ 1/2 ಇತ್ಯಾದಿ.**
- **ಮಕ್ಕಳ ಬರವಣಿಗೆ ಉತ್ತಮಗೊಳಿಸಲು ಬೇಸಿಗೆ ರಜಾ ಉತ್ತಮ ಮಾರ್ಗ. ಮಕ್ಕಳಿಗೆ ಸುತ್ತ ಮುತ್ತಲಿನ ಸಣ್ಣ ಪುಟ್ಟ ವಿಷಯದ ಕುರಿತು 50-100 ಪದಗಳಲ್ಲಿ ತಮ್ಮ ಮನಸ್ಸಿಗೆ ತಿಳಿದ ತಾವು ಕಂಡುಕೊಂಡ ಮಾಹಿತಿ ಕುರಿತು ಪ್ರಬಂಧ ಬರೆಯಲು ತಿಳಿಸುವುದು ಇದರಿಂದ ಪದಗುಚ್ಛ ಸಂಗ್ರಹವಾಗುತ್ತದೆ, ಬರವಣಿಗೆ ಶೈಲಿ ಬದಲಾಗುತ್ತದೆ.**
- **ಎರಡು ತಿಂಗಳ ಬೇಸಿಗೆ ರಜಾದಲ್ಲಿ ಮಾಡಿದ, ಕಲಿತ ಉತ್ತಮ ಕೆಲಸದ ಕುರಿತು ಡೈರಿ ಬರೆಯಲು ತಿಳಿಸುವುದು. ಇದರಿಂದ ಅವರ ಚಿಂತನಾ ಕೌಶಲ್ಯ ಅಭಿವೃದ್ಧಿಯಾಗಿ ಕಲಿಕೆಗೆ ಅವಕಾಶ ದೊರೆಯುತ್ತದೆ.**
- **ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಂಡ ಹಾಗೂ ಕಾಣದ ವಸ್ತು ವಿಷಯದ ಚಿತ್ರ ಬಿಡಿಸಲು ತಿಳಿಸಿ ಇದರಿಂದ ಗೋಚರ ಹಾಗೂ ಅಗೋಚರ ಕಲಿಕೆ ಉಂಟಾಗಿ ಮಕ್ಕಳ ಮೆದುಳು ಚುರುಕುಗೊಳ್ಳುತ್ತದೆ. ಮಕ್ಕಳು ಹೆಚ್ಚು ಕ್ರಿಯಾಶೀಲರಾಗುತ್ತಾರೆ.**
- **ಮಕ್ಕಳು ರಜೆಯ ಸಮಯದಲ್ಲಿ ಏನನ್ನು ಕಲಿಯದೇ ಕೇವಲ ಆಟದ ಕಡೆಗೆ ಗಮನ ಹರಿಸಿದರೆ ಮಕ್ಕಳ ಐಕ್ಯೂ 20 ಪಾಯಿಂಟ್ ಕಡಿಮೆಯಾಗುತ್ತದೆ ಎಂದು ಸಂಶೋಧನೆ ತಿಳಿಸುತ್ತದೆ. ಆದ ಕಾರಣ ಮಕ್ಕಳಿಗೆ ಅತಿಯಾದ ಒತ್ತಡ ಹೇರದೆ ಬೇಸಿಗೆ ರಜಾ ದಿನಗಳಲ್ಲಿ ಕಲಿಕೆ ಮರೆಯದೇ ಇರುವಂತೆ ಕೆಲ ಗಂಟೆ ಆಟದ ಮೂಲಕ ಕಲಿಸುವುದು ಉತ್ತಮ ಕಾರ್ಯ.**
- **ಯೋಗ, ಧ್ಯಾನ, ಈಜು, ನೃತ್ಯ, ಕರಾಟೆ ಮುಂತಾದ ಸಕಾರಾತ್ಮಕ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸುವುದರಿಂದ ಕಲಿಕೆಗೆ ಸೂಕ್ತವಾದ ಏಕಾಗ್ರತೆ ದೊರೆಯುತ್ತದೆ.**



- **ಸಂಗೀತ, ಸಾಹಿತ್ಯ, ಕಲೆ, ವಿಜ್ಞಾನ, ತಂತ್ರಜ್ಞಾನ, ಮುಂತಾದ ವಿಷಯದ ಪರಿಚಯ ಮಾಡುವುದರಿಂದ ಮಕ್ಕಳ ಸರ್ವಾಂಗೀಣ ಕಲಿಕಾಪ್ರಗತಿ ಉಂಟಾಗುತ್ತದೆ.**

ಕಡಿಮೆ ಜ್ಞಾನ ಹೊಂದಿರುವ ವಿಷಯದ ಪರಿಪೂರ್ಣ ಜ್ಞಾನ ಪಡೆಯುವಂತೆ ಮಾಡಲು ಬೇಸಿಗೆ ರಜೆ ಸದಾವಕಾಶ. ಕೊಠಡಿಯಲ್ಲಿ ಕಲಿಸುವುದಕ್ಕಿಂತ ಮೈದಾನದಲ್ಲಿ ಚೆಂಡಿನೊಂದಿಗೆ ಕಲಿ ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಮಕ್ಕಳು ಆಟದ ಮೂಲಕ ಪಾಠ ಕಲಿಯುವುದು ಒಳ್ಳೆಯದು. ಪ್ರವಾಸದ ಮೂಲಕ ಮಕ್ಕಳಿಗೆ ಆಯಾ ಸ್ಥಳದ ಕುರಿತು ಸಮಗ್ರ ಮಾಹಿತಿ ನೀಡುವುದರಿಂದ ಪ್ರತ್ಯಕ್ಷ ಕಲಿಕೆ ಉಂಟಾಗುತ್ತದೆ.

ಸಮಯ ಸಿಕ್ಕರೆ ಸಾಕು ಮಕ್ಕಳು ಮೊಬೈಲ್ ಹಿಡಿಯುತ್ತಾರೆ, ಇನ್ನು ಬೇಸಿಗೆ ಕಾಲದ ರಜಾ ದೊರೆತರೆ ಸಾಕು ಮೊಬೈಲ್ ದಾಸರಾಗುತ್ತಾರೆ ಮಕ್ಕಳ ಈ ಮೊಬೈಲ್ ಚಟವನ್ನು ತಪ್ಪಿಸಲು ಕುಟುಂಬ, ಸ್ನೇಹಿತರು, ಸಂಬಂಧಿಕರೊಂದಿಗೆ ಬೆರೆಯುವಂತೆ ಮಾಡಬೇಕು. ಇದರಿಂದ ಮಕ್ಕಳಲ್ಲಿ ವಾಗ್(ಮಾತಿನ) ಚಾತುರ್ಯ ಬೆಳೆದು, ಆತ್ಮವಿಶ್ವಾಸ ಉಂಟಾಗಿ ಕಲಿಕೆ ಸುಗಮವಾಗಿ ಸಾಗುತ್ತದೆ. ಮಕ್ಕಳಿಗೆ ಮನೆ ವಸ್ತುಗಳನ್ನು ಸ್ವಚ್ಛತೆ, ಗಿಡ ನೆಡುವಿಕೆ, ಅಧ್ಯಾತ್ಮ ಪರಿಚಯ, ಸಣ್ಣ ಪುಟ್ಟ ದಾನ ಮಾಡುವುದರಿಂದ ಹೊರ ಜಗತ್ತಿನ ವಾಸ್ತವದ ಅರಿವು ಉಂಟಾಗಿ ಜೀವನದ ಕಲಿಕೆ ದೊರೆಯುತ್ತದೆ

## ಬೆಂಗಳೂರಿನ ಕತೆಗಳು

• ಅತ್ರಿ, ಬೆಂಗಳೂರು

### ನಿರ್ಧಾರ

ಮೂರ್ತಿಗಳು ಬಹುದಿನಗಳಿಂದ ಯೋಚನೆಯಲ್ಲಿ ಮುಳುಗಿದ್ದರು. ಒಂದು ನಿರ್ಧಾರಕ್ಕೆ ಬರಲು ಆಗುತ್ತಿರಲಿಲ್ಲ. ಇದ್ದ ಒಬ್ಬ ಮಗ ಅಮೇರಿಕಾದಲ್ಲಿ ಇದ್ದ. ಮೂರ್ನಾಕು ವರ್ಷಕ್ಕೊಮ್ಮೆ ಬರುತ್ತಿದ್ದ ಮತ್ತು ಆಗಾಗ ಫೋನ್ ಮಾಡುತ್ತಿದ್ದ. ವರ್ಷಕ್ಕೊಮ್ಮೆ ದುಡ್ಡು ಕಳಿಸುತ್ತಿದ್ದ. ಇತ್ತೀಚೆಗೆ ಮನೆ ಹತ್ತಿರದ ಹೊಟೇಲ್‌ನಲ್ಲಿ ಮನೋಹರ ಪರಿಚಯವಾಗಿದ್ದ. ಅವನ ನಯ ವಿನಯ, ಹಿರಿಯರ ಕಡೆಗೆ ಗೌರವ ನೋಡಿದಾಗ, ಸದಾ ಸಿಡುಕುತ್ತಿದ್ದ ನನ್ನ ಮಗನಲ್ಲಿ ಕನಿಷ್ಟ 10% ರಷ್ಟಾದರು ಈ ಗುಣ ಇರಬಾರದೆ ಎಂದು



ಅನಿಸುತಿತ್ತು. ಮನೋಹರ ಮೊನ್ನೆ ಊರಾಚೆಯ ಒಂದು ವೃದ್ಧಾಶ್ರಮದ ಬಗ್ಗೆ ಹೇಳಿದ್ದ. ಈ ಮನೆಯನ್ನು ಮಾರಿ ಅಲ್ಲಿ ಹಾಯಾಗಿ ಜೀವನ ಮಾಡಬಹುದು ಎಂದಿದ್ದ. ಮಗ ಸುತಾರಾಂ ಒಪ್ಪಿರಲಿಲ್ಲ. ಮನೋಹರನಂಥವರಿಂದ ದೂರ ಇರಲು ಹೇಳಿದ್ದ. ದೂರದಲ್ಲಿ ಕುಳಿತು ಸಿಡುಕುವರಿಗಿಂತ ಸನಿಹದಲ್ಲಿ ಸಹಾಯ ಮಾಡುವವರು ಮುಖ್ಯವೆಂದೆನಿಸಿ ಮನೆಯನ್ನು ಮಾರಿದರು. ಮನೆ ಮಾರಿದ ಇಡುಗಂಟನ್ನು ಆ ವೃದ್ಧಾಶ್ರಮಕ್ಕೆ ಕೊಟ್ಟು ಸೇರಿದ ಕೆಲ ದಿನಗಳು ಕಳೆದ ಮೇಲೆ ಅನಿಸಿದ್ದು ಮಗ ಹೇಳಿದ್ದು ಸರಿ ಎಂದು. ಮನೋಹರ ತನ್ನ ಪಾಲು ಪಡೆದು, ಮುಂದಿನ ಶಿಕಾರಿಯ ಬಗ್ಗೆ ತಯಾರಿ ನಡೆಸುತಿದ್ದ.

### ಕೃತಜ್ಞತೆ

ಅಂದು ರಮೇಶನಿಗೆ ಯಾಕೋ ಬಾಲ್ಯದ ನೆನಪು ತುಂಬಾ ಕಾಡುತ್ತಿತು. ತಕ್ಷಣ ಊರಿಗೆ ಹೋಗಬೇಕೆನಿಸಿತು. ನಮ್ಮವರಿಲ್ಲದ ಊರಿನಲ್ಲಿ ನಾನೇಕಿದ್ದೇನೆಂಬ ಪ್ರಶ್ನೆ ಕಾಡತೊಡ ಗಿತು. ಸ್ವಲ್ಪ ಸಮಯದ ನಂತರ ಮನಸ್ಸು ವಾಸ್ತವಕ್ಕೆ ಬಂದಿತು. ಈ ಕೆಲಸದಿಂದಲೇ ತಂಗಿಯ ಮದುವೆ ಮಾಡಿದ್ದು, ಊರಿನಲ್ಲಿ ಮನೆ ಕಟ್ಟಿದ್ದು, ಅಮ್ಮನಿಗೆ ಮಂಡಿ ಆಪರೇಷನ್ ಮಾಡಿಸಿದ್ದು ಮತ್ತಿತರ ಕಟು ಸತ್ಯದ ಅರಿವಾಯಿತು. ಹುಟ್ಟೂರಿನಲ್ಲಿ ಮರ್ಯಾದೆಯಿಂದ ಬದುಕಲು ಸಹಾಯ ಮಾಡಿದ ಈ ಕರ್ಮ ಭೂಮಿ ಎಷ್ಟು ದೊಡ್ಡದಲ್ಲವಾ ಎಂದೆನಿಸಿತು. ಕಛೇರಿಯಲ್ಲಿ ಈ ನಗರವನ್ನು ಬೈಯುವವರ ಜತೆ ಇನ್ನೆಂದು ಸೇರುವುದಿಲ್ಲ ಎಂದು ಮನದಲ್ಲಿ ಶಪಥ ಮಾಡಿ ಕೆಲಸಕ್ಕೆ ಹೊರಡಲು ಅಣಿಯಾದನು.

### ಹಿಂದಿನ ನೆನಪುಗಳು

ಅಂದು ಬೆಳಗ್ಗೆ ಗೋಪಾಲರಾಯರು ಚಡಪಡಿಸುತ್ತಿದ್ದರು. ಬೆಳಗಿನಿಂದ ವಾಟ್ಸಪ್ ಕೆಲಸ ಮಾಡುತ್ತಿರಲಿಲ್ಲ. ಮುಖ್ಯವಾದ ಸಂದೇಶಕ್ಕೆ ಕಾಯುತ್ತಿದ್ದರು. ಮನೆ ಮಂದಿಯೆಲ್ಲ ಕೆಲಸಗಳಿಗೆ ಹೊರಡುವ ಅವಸರದಲ್ಲಿದ್ದರು. ಮೊಬೈಲ್ ಮೇಲೆ ಎಷ್ಟು ಅವಲಂಬಿತರಾಗಿದ್ದೇವೆ ಎಂದೆನಿಸಿತು. ಮೊಬೈಲ್ ಒಂದು ಮಿನಿ ಕಂಪ್ಯೂಟರ್ ಎಂದು ಮೊಮ್ಮಗ ಹೇಳಿದ್ದು ನೆನಪಿಗೆ ಬಂತು.ಆಗ ನೆನಪಾದದ್ದು, 90ರ ದಶಕದಲ್ಲಿ, ಆಫೀಸಿಗೆ ಹೊಸದಾಗಿ ಕಂಪ್ಯೂಟರ್ ಬಂದಾಗ ಅವು ತಮ್ಮ ಕೆಲಸಗಳನ್ನು ಕಸಿಯುತ್ತವೆ ಎಂದು ಯೂನಿಯನ್ ಲೀಡರ್ ಆಗಿ ಹೋರಾಟ ಮಾಡಿ, ಕೆಲವನ್ನು ಒಡೆದು ಹಾಕಿದ ಪ್ರಸಂಗ. ಅದನ್ನ ನೆನೆಸಿಕೊಂಡು ಒಳಗೊಳಗೆ ನಗತೊಡಗಿದರು. ಸದ್ಯ ಆವಾಗ ವಾಟ್ಸಪ್, ಫೇಸ್‌ಬುಕ್ ಇರಲಿಲ್ಲ. ಇದ್ದಿದ್ದರೇ ನಾನು ವೈರಲ್ ಆಗಿಬಿಡ್ತಿದ್ದೆ ಎಂಬಾ ಕಲ್ಪನೆಯೇ ಬೆವರಿಳಿಸಿತು.



## ಪಾಕಶಾಲೆ

### ಕರ್ನಾಟಕದ ಶ್ರೇಷ್ಠ ಸಿಹಿತಿಂಡಿ ಹಯಗ್ರೀವ

• ಬೆಂ. ಮು. ಮಾರುತಿ

ಅನೇಕರಿಗೆ ತಿಳಿದಿರುವಂತೆ, ಹಯಗ್ರೀವ ಎಂಬುದು ಭಗವಾನ್ ವಿಷ್ಣುವಿನ ಅವತಾರದ ಹೆಸರು. ಹೀಗಾಗಿ ಹಯಗ್ರೀವನಿಗೆ ಅರ್ಪಿಸಿದಂತೆ ಈ ಸಿಹಿ ಖಾದ್ಯದ ಹೆಸರು. ರಾಜ್ಯದ ಸೋದೆ ವಾದಿರಾಜ್ ಮಠದಲ್ಲಿ ಇದನ್ನು ಪ್ರತಿದಿನ ನೈವೇದ್ಯವಾಗಿ ನೀಡಲಾಗುತ್ತದೆ. ಹಯಗ್ರೀವ ಮಡ್ಡಿ ಎಂದೂ ಕರೆಯಲ್ಪಡುವ ಇದು ಕರ್ನಾಟಕದ ಮಾಧ್ವ ಬ್ರಾಹ್ಮಣರ ಮನೆಗಳಲ್ಲಿ ಮಾಡುವ ಸಾಮಾನ್ಯ ಭಕ್ಷ್ಯ. ಹಯಗ್ರೀವದ ಮೂಲ ಪದಾರ್ಥವೇ ಬೆಲ್ಲ ಮತ್ತು ಕಡಲೆ ಬೇಳೆ. ಬೆಲ್ಲ ಔಷಧೀಯ ಗುಣಗಳಿಗೆ ಹೆಸರುವಾಸಿಯಾಗಿದೆ. ನೋಯುತ್ತಿರುವ ಗಂಟಲು ಮತ್ತು ಕೆಮ್ಮನ್ನು ಶಮನಪಡಿಸಲು ಬಳಸಲಾಗುತ್ತದೆ. ಇದು ಖನಿಜಗಳಿಂದ ಸಮೃದ್ಧವಾಗಿದೆ. ರಕ್ತವನ್ನು ಶುದ್ಧೀಕರಿಸುತ್ತದೆ ಮತ್ತು ಮುಟ್ಟಿನ ಸೆಳೆತದಿಂದ ಪರಿಹಾರವನ್ನು ನೀಡುತ್ತದೆ.

**ಬೇಕಾದ ಪದಾರ್ಥಗಳು:** 1/2 ಕಪ್ ಕಡ್ಲೆಬೇಳೆ , 1 ಕಪ್ ಬೆಲ್ಲ, ಎರಡೂವರೆ ಕಪ್ ನೀರು, ಕಾಲು ಕಪ್ ತುರಿದ ತೆಂಗಿನಕಾಯಿ, ಅರ್ಧ ಟೀಸ್ಪೂನ್ ಏಲಕ್ಕಿ ಪುಡಿ, 2 ಟೀಸ್ಪೂನ್ ಗೋಡಂಬಿ, 2 ಟೀಸ್ಪೂನ್ ಒಣದ್ರಾಕ್ಷಿ, ಎರಡೂವರೆ ಚಮಚ ತುಪ್ಪ.

**ತಯಾರಿಸುವ ವಿಧಾನ:** ತೊಳೆದ ಕಡ್ಲೆ ಬೇಳೆಯನ್ನು ಪ್ರೆಶರ್ ಕುಕ್ಕರ್‌ನಲ್ಲಿ 3 ಸೀಟಿಗಳವರೆಗೆ ಬೇಯಿಸಿ. 3 ಸೀಟಿಗಳ ನಂತರ 5 ನಿಮಿಷಗಳ ಕಾಲ ಕುದಿಸಿ ಮತ್ತು ಬೇಯಿಸಿ. ಒಂದು ಬಟ್ಟಲಿನಲ್ಲಿ ಕಡಲೆ ಬೇಳೆಯನ್ನು ಹೊರತೆಗೆಯಿರಿ, ಮತ್ತೊಂದು ಬಾಣಲೆಯಲ್ಲಿ, ಬೆಲ್ಲವನ್ನು ಹಾಕಿ ಮತ್ತು ನೀರನ್ನು ಸೇರಿಸಿ ಮತ್ತು ಬೆಲ್ಲವು ಸಂಪೂರ್ಣವಾಗಿ ಕರಗುವ ತನಕ ಮಧ್ಯಮ ಉರಿಯಲ್ಲಿ ಬೇಯಿಸಿ ಮತ್ತು ಪಾಕವನ್ನು ಕುದಿಯಲು ಪ್ರಾರಂಭಿಸುತ್ತದೆ.'ಂತರ ಬೆಲ್ಲದ ಪಾಕಕ್ಕೆ ಬೇಯಿಸಿದ ಕಡಲೆ ಬೇಳೆಯನ್ನು ಸೇರಿಸಿ ಮತ್ತು ಅದನ್ನು ಚೆನ್ನಾಗಿ ಬೆರೆಸಿ.



ಮಿಶ್ರಣಕ್ಕೆ ತುಪ್ಪ ಸೇರಿಸಿ ಮತ್ತು 10 ನಿಮಿಷ ಬೇಯಿಸಿ. ಮಿಶ್ರಣ ಗಟ್ಟಿಯಾದ ನಂತರ ತೆಂಗಿನ ತುರಿ ಮತ್ತು ಏಲಕ್ಕಿ ಪುಡಿಯನ್ನು ಹಾಕಿ ಚೆನ್ನಾಗಿ ಕಲಸಿ ನಂತರ ಜ್ವಾಲೆಯನ್ನು ನಂದಿಸಿ. ಸಣ್ಣ ಬಾಣಲೆಯಲ್ಲಿ, ತುಪ್ಪವನ್ನು ಬಿಸಿ ಮಾಡಿ ಮತ್ತು ಅದಕ್ಕೆ ಗೋಡಂಬಿ ಮತ್ತು ಒಣದ್ರಾಕ್ಷಿ ಸೇರಿಸಿ. ಗೋಡಂಬಿ ಸ್ವಲ್ಪ ಬಣ್ಣ ಬದಲಾಗುವವರೆಗೆ ಅವು ಗಳನ್ನು ಫ್ರೈ ಮಾಡಿ. ಕಡಲೆ ಮತ್ತು ಬೆಲ್ಲದ ಮಿಶ್ರಣಕ್ಕೆ ಸೇರಿಸಿದ ನಂತರ ಬಾಳೆ ಎಲೆಯ ಮೇಲೆ ಬಡಿಸಿ. ಹಯಗ್ರೀವ ಅತ್ಯಂತ ಸುಲಭವಾಗಿ ಮಾಡಬಹುದಾದ ಸಿಹಿ ಖಾದ್ಯ ವಾಗಿದ್ದು ಮೊದಲ ಪ್ರಯತ್ನದಲ್ಲಿಯೇ ಹೆಚ್ಚಿನ ಜನರು ಯಶಸ್ವಿಯಾಗಿ ತಯಾರಿಸಬಹುದು. ಕೇವಲ ಬೆಲ್ಲ ಮತ್ತು ಕಡ್ಲೆಬೇಳೆಯಿಂದ ತಯಾರಿಸಲಾದ ಈ ಸಿಹಿತಿಂಡಿಯು ತುಪ್ಪ ಮತ್ತು ಒಣ ಹಣ್ಣುಗಳ ಮೇಲ್ಭಾಗದಿಂದ ಶ್ರೀಮಂತ ಮತ್ತು ಸುವಾಸನೆಯ ರುಚಿಯನ್ನು ಹೊಂದಿರುತ್ತದೆ.




# ಅಳಿಸಲಾಗದ ಶಾಯಿ ಕರ್ನಾಟಕದ ಹೆಮ್ಮೆ

• ಪ್ರಕಾಶ ಹೆಗಡೆ

ಭಾರತದ ಚುನಾವಣಾ ಆಯೋಗವು ಮೈಸೂರು ಪೇಂಟ್ಸ್ ವಾರ್ನಿಷ್ ಲಿಮಿಟೆಡ್‌ನಿಂದ ಅಳಿಸಲಾಗದ ಶಾಯಿಯ 55 ಕೋಟಿ ಮಾರಾಟದ ಆದೇಶವನ್ನು ನೀಡಿದೆ. ಮೈಸೂರಿನಲ್ಲಿರುವ ಈ ಕಂಪನಿಗೆ ಇದು ಇಲ್ಲಿಯವರೆಗಿನ ಅತೀ ಹೆಚ್ಚು ಮೌಲ್ಯದ ಆದೇಶ. ಅಳಿಸಲಾಗದ ಶಾಯಿ, ಮತ ಚಲಾಯಿಸಿದ ಮತದಾರನನ್ನು ಗುರುತಿಸಲು ಬೆರಳಿನ ಮೇಲೆ ಮಾಡುವ ಒಂದು ಚಿನ್ಹೆ. ಭಾರತದ ಚುನಾವಣಾ ಆಯೋಗವು ಅನೇಕ ದಶಕಗಳಿಂದ ಮೈಸೂರು ಪೇಂಟ್ಸ್ ಕಂಪನಿಯಿಂದ ಮಾತ್ರ ಶಾಯಿಯನ್ನು ಏಕೆ ತರಿಸುತ್ತಿದೆಯೆಂದು ತಿಳಿದುಕೊಂಡರೆ ಎಂಪಿವಿಎಲ್ ಬಗ್ಗೆ ಪ್ರತೀ ಕರ್ನಾಟಕದವರಷ್ಟೇ ಅಲ್ಲ, ಭಾರತೀಯರು ಹೆಮ್ಮೆ ಪಡುವ



ವಿಷಯ. ಭಾರತವಷ್ಟೇ ಅಲ್ಲ, ಜಗತ್ತಿನ ಮೂವತ್ತಕ್ಕೂ ಅಧಿಕ ದೇಶಗಳಿಗೆ ಅಳಿಸಲಾಗದ ಶಾಯಿಯನ್ನು ಮೈಸೂರು ಪೇಂಟ್ಸ್ ಕಂಪನಿ ರಫ್ತು ಮಾಡುತ್ತಿದೆ.

### ಮೈಸೂರು ಪೇಂಟ್ಸ್ ವಾರ್ನಿಷ್ ಲಿಮಿಟೆಡ್

ಮೈಸೂರು ಪೇಂಟ್ಸ್ ವಾರ್ನಿಷ್ ಲಿಮಿಟೆಡ್‌ನ್ನು (ಎಂವಿಪಿಎಲ್) 1937ರಲ್ಲಿ ಅಂದಿನ ಮೈಸೂರು ಪ್ರಾಂತ್ಯದ ಮಹಾರಾಜರಾದ ನಲ್ವಾಡಿ ಕೃಷ್ಣರಾಜ ಒಡೆಯರ್ ಅವರು, 'ಮೈಸೂರು ಲ್ಯಾಕ್ ಪೇಂಟ್ ವರ್ಕ್ಸ್ ಲಿಮಿಟೆಡ್' ಹೆಸರಿನಲ್ಲಿ ಸ್ಥಾಪಿಸಿದರು. ಇದು ಲ್ಯಾಕ್ ಕೀಟಗಳಿಂದ ಉತ್ಪತ್ತಿಯಾಗುವ ಜಿಗುಟಾದ ಪದಾರ್ಥವನ್ನು ಸಂಸ್ಕರಿಸಿ ವಾಣಿಜ್ಯ ಬಳಕೆಗಾಗಿ ಉಪಯೋಗಿಸುವ ಉದ್ಯಮ. ಆಟಿಕೆಗಳು, ಆಭರಣಗಳು, ವಿದ್ಯುತ್ ನಿರೋಧಕ ವಸ್ತುಗಳು, ವಾರ್ನಿಷ್‌ಗಳು, ಪಾಲಿಶ್‌ಗಳು, ಶಿಲಾಮುದ್ರಣ ಶಾಯಿಗಳು , ಶೂ ಪಾಲಿಶ್‌ಗಳು, ಸೀಲಿಂಗ್ ಮೇಣ ಇತ್ಯಾದಿಗಳ ತಯಾರಿಕೆಯಲ್ಲಿ ಲ್ಯಾಕ್‌ನ್ನು ಬಳಸಲಾಗುತ್ತದೆ. ಇದನ್ನು ವಿದ್ಯುತ್ ನಿರೋಧನಗಳು, ಕಾಗದಗಳ ಲ್ಯಾಮಿನೇಷನ್, ಟೋಪಿ ಪ್ರೂಫಿಂಗ್ ಮತ್ತು ಚಿತ್ರಗಳು ಮತ್ತು ಪಳೆಯುಳಿಕೆಗಳ ಲೇಪನದಲ್ಲಿಯೂ ಕೂಡ ಬಳಸಲಾಗುತ್ತದೆ. ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸುವುದೇ ಮೈಸೂರು ಮಹಾರಾಜರ ಮೂಲ ಉದ್ದೇಶವಾಗಿತ್ತು. 20ನೇ ಶತಮಾನದ 8ನೇ ದಶಕದಲ್ಲಿ, ಕಂಪನಿಯು ಲ್ಯಾಕ್ ಆಧಾರಿತ ವಾರ್ನಿಷ್‌ಗಳು ಮತ್ತು ಮೇಣಗಳ ತಯಾರಿಕೆಯನ್ನು ನಿಲ್ಲಿಸಬೇಕಾಯಿತು. ಇದಕ್ಕೆ ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮಗಳೇ ಕಾರಣ. ಸ್ವಾತಂತ್ರ್ಯದ ನಂತರ ಈ ಕಂಪನಿಯನ್ನು ಸಾರ್ವಜನಿಕ ವಲಯದ ಕಂಪನಿಯಾಗಿ ಪರಿವರ್ತನೆ ಮಾಡಲಾಯಿತು.



### ರಹಸ್ಯ ಸೂತ್ರ

**ಅಳಿಸಲಾಗದ ಶಾಯಿಯನ್ನು ತಯಾರಿಸುವ ರಹಸ್ಯ ಸೂತ್ರವು ಸಂಪೂರ್ಣವಾಗಿ ಗೌಪ್ಯವಾಗಿರಬೇಕು ಎಂದು ಸಿಎಸ್ಐಆರ್ ಎಂಪಿವಿಎಲ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಕಂಪನಿಯ ಮೇಲಿನ ಮ್ಯಾನೇಜ್ಮೆಂಟ್ ಸಹ ರಹಸ್ಯ ಸೂತ್ರದ ಬಗ್ಗೆ ತಿಳಿಯಲು ಆಸ್ಪದವಿಲ್ಲ. ಕಂಪನಿಯಲ್ಲಿರುವ ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಶಾಯಿಯ ರಾಸಾಯನಿಕ ಸಂಯುಕ್ತ ತಿಳಿದಿದೆ. ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಕಾರ್ಪೊರೇಟ್ ಪ್ರೊಟೋಕಾಲ್ ಕಾಪಾಡಿಕೊಂಡು ಬಂದಿದೆ. ಈ ವಿಶ್ವಾಸಾರ್ಹ ರಸಾಯನಶಾಸ್ತ್ರಜ್ಞರು ನಿವೃತ್ತರಾದಾಗ ಇನ್ನೊಬ್ಬ ಪ್ರಬುದ್ಧ ವ್ಯಕ್ತಿಗೆ ರವಾನಿಸುವ ಕಾರ್ಯವಿಧಾನವೂ ಸವಿವರವಾಗಿ ನಮೂದಿಸಲ್ಪಟ್ಟಿದೆ. ಈ ವಿಶೇಷ ಶಾಯಿಯು ಗಮನಾರ್ಹ ಶೇಕಡಾವಾರು ಸಿಲ್ವರ್ ನೈಟ್ರೇಟ್‌ನ್ನು ಹೊಂದಿದ್ದು, ಇದು ಸುಮಾರು ಮೂವತ್ತು ಸೆಕೆಂಡುಗಳಲ್ಲಿ ಶಾಯಿಯನ್ನು ಒಣಗಿಸಲು ಸಹಾಯ ಮಾಡುತ್ತದೆ. ಹಾಗೆಯೇ ಏಕಕಾಲದಲ್ಲಿ ಇದು ಕಪ್ಪು ನೀಲಿ ಅಳಿಸಲಾಗದ ಕಲೆಯನ್ನು ಚರ್ಮ ಮತ್ತು ಉಗುರಿನ ಮೇಲೆ ಉಳಿಸಿಬಿಡುತ್ತದೆ.**



### ಮತದಾರರ ಶಾಯಿಯ ಅಭಿವೃದ್ಧಿ

ಸ್ವಾತಂತ್ರ್ಯದ ನಂತರ, ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಸೈಂಟಿಫಿಕ್ ರಿಸರ್ಚ್ (ಸಿಎಸ್ಐಆರ್) ವಿಜ್ಞಾನಿಗಳು ಒಂದು ರೀತಿಯ ಮತದಾರರ ಶಾಯಿಯನ್ನು ಅಭಿವೃದ್ಧಿ ಪಡಿಸಿದರು. ಅದೇ ಮೋಸದ ಮತದಾನವನ್ನು ತಪ್ಪಿಸಲು ಸುಲಭವಾಗಿ ಸ್ವಚ್ಛಗೊಳಿಸಲು ಅಥವಾ ತೊಳೆದುಕೊಳ್ಳಲು ಸಾಧ್ಯವಾಗದ ಶಾಯಿಯ ಆವಿಷ್ಕಾರ. ಆಗ ಸಿಎಸ್ಐಆರ್ ಈ ಕಂಪನಿಯನ್ನು



ತಮ್ಮ ಏಕೈಕ ಅಳಿಸಲಾಗದ ಶಾಯಿಯ ತಯಾರಕ ಪರವಾನಗಿದಾರ ಎಂದು ಆಯ್ಕೆ ಮಾಡಿತು.

ಈ ಮಾಂತ್ರಿಕ ಸಂಯುಕ್ತ ರಸಾಯನ ತಯಾರಿಕೆಯಲ್ಲಿ ಕಂಪನಿಯು ತನ್ನ ಏಕಸ್ವಾಮ್ಯದ ಸ್ಥಾನಮಾನವನ್ನು ಮುಂದುವರೆಸಿದೆ. ಸಾರ್ವಜನಿಕ ಕ್ಷೇತ್ರದ ಕೆಲವೇ ಲಾಭ ಗಳಿಸುತ್ತಿರುವ ಯಶಸ್ವಿ ಉದ್ಯಮಗಳಲ್ಲೊಂದಾದ ಎಂಪಿವಿಎಲ್ ಪ್ರತಿ ವರ್ಷ ಸತತವಾಗಿ ಲಾಭಾಂಶ ವಿತರಣಾ ಕಾರ್ಪೊರೇಟ್ ಎಂದೂ ಪ್ರಸಿದ್ಧಿಯನ್ನು ಪಡೆದಿದೆ. ಈಗ ಹೇಳಿ. ಹೆಮ್ಮೆಯ ವಿಷಯವಲ್ಲವೇ?